ಗಂಗಾವತಿ ತಾಲ್ಲೂಕಿನ ಆಚಾರ್ ನರಸಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ

೮೪. ಶ್ರೀ ಹೆಚ್. ಎಸ್. ಮುರಳೀಧರ (ಗಂಗಾವತಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗಂಗಾವತಿ ತಾಲ್ಲೂಕಿನಲ್ಲಿ ಆಚಾರ್ ನರಸಾಪುರ ಗ್ರಾಮದ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

ಆ) ಮಕ್ಕಳ ಸಂಖ್ಯೆ ಬಹಳವಿದ್ದು, ಅಲ್ಲಿ ಶಿಕ್ಷಕರ ಸಂಖ್ಯೆ ಬಹಳ ಕಡಿಮೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಈ ಬಗ್ಗೆ ಗಂಗಾವತಿಯ ಸಹಾಯಕ ಅಧಿಕಾರಿಗಳು ಶಾಲೆಯಲ್ಲಿ ಇನ್ನೂ ಅನೇಕ ಶಿಕ್ಷಕರನ್ನು ನೇಮಿಸುವುದು ಬಹಳ ಅಗತ್ಯವಿರುವುದು ಎಂದು ವರದಿ ಮಾಡಿರುವುದು ನಿಜವಲ್ಲವೇ ;

ಈ) ಹಾಗಿದ್ದಲ್ಲಿ ಸರ್ಕಾರದವರು ಆಚಾರ್ ನರಸಾಪುರ ಗ್ರಾಮ ಈ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರನ್ನು ನೇಮಿಸಲು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಮಾನ್ಯ ಶಿಕ್ಷಣ ಮಂತ್ರಿಗಳು).—

(ಅ) ಬಂದಿದೆ

(ಆ) ಬಂದಿದೆ.

(ಇ) ನಿಜ. ಸಹಾಯಕ ಶಿಕ್ಷಣ ಅಧಿಕಾರಿಗಳು ಉಪನಿರ್ದೇಶಕರಿಗೆ ಪತ್ರ ಬರೆದು ಶಿಕ್ಷಕರ ನೇಮಕಾತಿ ಮಾಡಬೇಕೆಂದು ಕೋರಿರುತ್ತಾರೆ.

(ಈ) ರಾಯಚೂರು ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯನ್ನು ರಚಿಸಿದ್ದು ಖಾಲಿ ಇರುವ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಹುದ್ದೆಗಳನ್ನು ಶೀಘ್ರವಾಗಿ ತುಂಬಲಾಗುವುದು.

ಮಾನ್ಯ ಸದಸ್ಯರು ಹಾಜರಿರಲಿಲ್ಲ

ಬಳ್ಳಾರಿ ಜಿಲ್ಲೆಯ ಕೂಡ್ಲಗಿಯಲ್ಲಿ ಪ್ರಥಮ ದರ್ಜೆಯ ಕಾಲೇಜು

೮೯೧ (೧೧೦) ಶ್ರೀ ಬಿ. ಚನ್ನಬಸವನಗೌಡ (ಕೂಡ್ಲಗಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶಿಕ್ಷಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಬಳ್ಳಾರಿ ಜಿಲ್ಲಾ ಕೂಡ್ಲಗಿಯಲ್ಲಿರುವ ಸರ್ಕಾರಿ ಕಿರಿಯ ಕಾಲೇಜನ್ನು ಪ್ರಥಮ ದರ್ಜೆ ಕಾಲೇಜನ್ನಾಗಿ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

(ಆ) ಹಾಗಿದ್ದಲ್ಲಿ ಕಾಲೇಜು ಸ್ಥಾಪನೆ ಜುಲೈ ೧೯೮೪ ರಲ್ಲಿ ಮಾಡಲಾಗುವುದೇ ?

ಶ್ರೀ ಬಿ. ರಾಚಯ್ಯ (ಮಾನ್ಯ ವಿದ್ಯಾ ಮಂತ್ರಿಗಳು).—

(ಅ) ಇದೆ.

(ಆ) ಪರಿಶೀಲಿಸಲಾಗುವುದು.

ಶ್ರೀ ಕೆ. ಚನ್ನಬಸವನಗೌಡ.—ಈ ವರ್ಷವೇ ಈ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ಕೂಡ್ಲಗಿಯಿಂದ ಒಂದು ನಿಯೋಗ ಬಂದು ತಮ್ಮನ್ನು ಭೇಟಿ ಮಾಡಿದಾಗ ಆದರಲ್ಲಿ ನಾನೂ ಸಹ